## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2013-14ನೇ ಸಾಲಿನಲ್ಲಿ ಗ್ರೂಪ್-ಎ ಕೋರ್ಸಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರಾತಿ ಕುರಿತು. ಜಿಲ್ಲಾ ವಲಯ ಯೋಜನೇತರ ಕಾರ್ಯಕ್ರಮದಡಿ ಉಳಿತಾಯವಾಗಿರುವ ಅನುದಾನವನ್ನು ಬಳಸುವ ಬಗ್ಗೆ.

**ಓದಲಾಗಿದೆ:** 1) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕ ಕಡತ ಸಂ. ಹಿಂವಕನಿ/ಶುವಿ/ಸಿಆರ್-10/2013-14 ದಿನಾಂಕ 15-3-2014

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಏಕ ಕಡತದಲ್ಲಿ ಆಯುಕ್ತರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು, ಸರ್ಕಾರದ ಆದೇಶದಂತೆ 2013-14ನೇ ಸಾಲಿನಲ್ಲಿ ಶುಲ್ಕ ವಿನಾಯಿತಿ, ವಿದ್ಯಾಸಿರಿ – ಊಟ ವಸತಿ ಸಹಾಯ ಯೋಜನೆ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಈ ಕಾರ್ಯಕ್ರಮಗಳನ್ನು ಆನ್‌ಲೈನ್ ಮೂಲಕ ಅರ್ಜಿಗಳನ್ನು ಕರೆದು, ಅರ್ಹ ವಿದ್ಯಾರ್ಥಿಗಳಿಗೆ ಲಭ್ಯವಾಗುವ ಮೊತ್ತವನ್ನು ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಮಾಡುವ ಡಿಬಿಟಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಅದರಂತೆ ಸ್ವೀಕರಿಸಿದ ಅರ್ಜಿಗಳನ್ನು 4 ಹಂತಗಳಲ್ಲಿ ಅನ್‌ಲೈನ್ ಮೂಲಕ ಪರಿಶೀಲನೆ ಮಾಡಿ, ಅರ್ಹ ವಿದ್ಯಾರ್ಥಿಗಳನ್ನು ಗುರುತಿಸಲಾಗಿದೆ. ಮಂಜೂರಾದ ವಿದ್ಯಾರ್ಥಿಗಳ ಬ್ಯಾಂಕ್‌ವಾರು/ಕಾಲೇಜುವಾರು ಪಟ್ಟಿ, ಮಂಜೂರಾತಿ ಆದೇಶ, ಬಿಲ್ಲು, ಇವುಗಳನ್ನು ಅನ್‌ಲೈನ್ ಮೂಲಕ ಸಿದ್ಧಪಡಿಸಿ ಮುದ್ರಿಸಿಕೊಂಡು ಖಜಾನೆಗಳಿಗೆ ಸಲ್ಲಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

2013-14ನೇ ಸಾಲಿನಲ್ಲಿ ರಾಜ್ಯ ವಲಯ ಯೋಜನೆ ಕೇಂದ್ರ ಪುರಸ್ಕೃತ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ (ಹಿಂ.ವ.ಗಳು) ಲೆಕ್ಕಶೀರ್ಷಿಕೆ 2225-03-277-2-51-059ರಡಿ ರೂ. 8706.41 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಈ ಅನುದಾನದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ(ಡೇ ಸ್ಕಾಲರ್‌ಶಿಪ್‌ಗಾಗಿ) ಕಾರ್ಯಕ್ರಮಕ್ಕೆ ರೂ. 2885.88 ಲಕ್ಷಗಳನ್ನು, ಆಡಳಿತಾತ್ಮಕ ವೆಚ್ಚಗಳಿಗಾಗಿ ರೂ. 28.38 ಲಕ್ಷಗಳನ್ನು ಹಾಗೂ ಗ್ರೂಪ್-ಎ ಕೋರ್ಸಿನ ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ಕಾರ್ಯಕ್ರಮಕ್ಕೆ ರೂ. 5792.15 ಲಕ್ಷಗಳನ್ನು ವಿನಿಯೋಗಿಸಲಾಗಿದೆ.

ಗ್ರೂಪ್ –ಎ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳಿಂದ ಸ್ವೀಕೃತವಾಗಿರುವ 42449 ಅರ್ಜಿಗಳಿಗೆ ಶುಲ್ಕ ವಿನಾಯಿತಿಗಾಗಿ ಒಟ್ಟಾರೆ ರೂ.8907.71 ಲಕ್ಷ ಅಗತ್ಯವಿರುತ್ತದೆ. ಆದರೆ, ಮೇಲೆ ತಿಳಿಸಿದಂತೆ ರೂ.5792.15 ಲಕ್ಷಗಳ ಮೊತ್ತವನ್ನು 27646 ವಿದ್ಯಾರ್ಥಿಗಳಿಗೆ ಮಾತ್ರ ಶುಲ್ಕ ವಿನಾಯಿತಿ ಮಂಜೂರಾತಿಗೆ ವಿನಿಯೋಗಿಸಲಾಗಿದೆ. ಇದರಿಂದಾಗಿ ಇನ್ನು 14803 ಅರ್ಹ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿಗಾಗಿ ರೂ. 3117.69 ಲಕ್ಷಗಳ ಅನುದಾನ ಲಭ್ಯವಿಲ್ಲದ ಕಾರಣ ಇವರಿಗೆ ಮಂಜೂರಾತಿ ನೀಡಲು ಸಾಧ್ಯವಾಗಿರುವುದಿಲ್ಲ.

2013-14ನೇ ಸಾಲಿನಲ್ಲಿ, ಜಿಲ್ಲಾವಲಯ ಯೋಜನೇತರ ಲೆಕ್ಕಶೀರ್ಷಿಕೆ 2225-00-103-0-28 ರಲ್ಲಿ ಜಿಲ್ಲಾ ವಲಯದಲ್ಲಿ ಶುಲ್ಕ ವಿನಾಯಿತಿ ಮಂಜೂರಾತಿಗಾಗಿ ಒಟ್ಟಾರೆ ರೂ.10347.53 ಲಕ್ಷಗಳನ್ನು ಒದಗಿಸಲಾಗಿದ್ದು, ಅರ್ಹ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರಾತಿಗಾಗಿ ರೂ. 6924.38 ಲಕ್ಷಗಳನ್ನು ಬಳಸಿಕೊಳ್ಳಲಾಗಿದ್ದು, ಇದರಲ್ಲಿ ರೂ. 3423.16 ಲಕ್ಷಗಳು ಉಳಿತಾಯವಾಗಿದೆ.

2013-14ನೇ ಸಾಲಿಗೆ ಗುಂಪು-ಎ ಹಾಗೂ ಬಿ.ಸಿ.ಡಿ. ಕೋರ್ಸುಗಳ ಶುಲ್ಕ ವಿನಾಯಿತಿ ಮಂಜೂರಾತಿಗೆ ರಾಜ್ಯವಲಯ ಯೋಜನೆ ಹಾಗೂ ಜಿಲ್ಲಾ ವಲಯ ಯೋಜನೇತರದಡಿ ಒದಗಿಸಿರುವ

ಒಟ್ಟಾರೆ ರೂ.16139.68 ಲಕ್ಷಗಳ ಅನುದಾನ ಸಾಕಾಗುತ್ತದೆಯಾದರೂ. ಜಿಲ್ಲಾವಲಯ ಯೋಜನೇತರ ಕಾರ್ಯಕ್ರಮದಡಿ ಅರ್ಹ ಅರ್ಜಿಗಳ ಸಂಖ್ಯೆ ಕಡಿಮೆ ಇದ್ದುದರಿಂದ ರೂ.3423.14 ಲಕ್ಷ ಉಳಿತಾಯವಾಗಿದೆ. ಹಾಗೂ ರಾಜ್ಯವಲಯ ಯೋಜನೆಯಡಿ ಅರ್ಜಿಗಳ ಸಂಖ್ಯೆ ಹೆಚ್ಚಿಗೆ ಇರುವುದರಿಂದ. ಈ ಬಾಬ್ತಿನಲ್ಲಿ ಲಭ್ಯವಿದ್ದ ಅನುದಾನ ರೂ.5792.15 ಲಕ್ಷ ಸಾಕಾಗುವುದಿಲ್ಲ.

ಆದ್ದರಿಂದ. ಈ ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಜಿಲ್ಲಾವಲಯ ಯೋಜನೇತರ ಬಾಬ್ತಿನಲ್ಲಿ ಸರ್ಕಾರಕ್ಕೆ ರೂ. 3423.14 ಲಕ್ಷಗಳನ್ನು ಹಿಂದಕ್ಕೊಪ್ಪಿಸಲಾಗುತ್ತಿದ್ದು. ಇದನ್ನು ಪರಿಗಣಿಸಿ. ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ 2225-03-277-2-51-059 ರಡಿ ಹೆಚ್ಚುವರಿಯಾಗಿ 3117.69 ಲಕ್ಷಗಳನ್ನು ಗುಂಪು-ಎ ಕೋರ್ಸಿನ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರು ಮಾಡುವ ಸಲುವಾಗಿ ಈ ಕಛೇರಿಗೆ ಬಿಡುಗಡೆ ಮಾಡುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ ಬಿಸಿಡಬ್ಲ್ಯೂ 246 ಬಿಎಂಎಸ್ 2014</u>**
**<u>ಬೆಂಗಳೂರು. ದಿನಾಂಕ 25-03-2014</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರೂಪ್-ಎ ಕೋರ್ಸ್‌ಗಳ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ರಾಜ್ಯ ವಲಯ ಯೋಜನೆ ಲೆಕ್ಕಶೀರ್ಷಿಕೆ 2225-03-277-0-51-059 ರಡಿ 2013-14ನೇ ಸಾಲಿಗೆ ಶುಲ್ಕ ವಿನಾಯಿತಿಗಾಗಿ 5792.15 ಲಕ್ಷ ರೂ.ಗಳು ಹಂಚಿಕೆಮಾಡಿದ್ದು, ಅರ್ಹರಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಶುಲ್ಕ ವಿನಾಯಿತಿ ನೀಡಲು ಇನ್ನೂ ರೂ.3117.69 ಲಕ್ಷಗಳು ಅಗತ್ಯವಿರುತ್ತದೆ ಹಿಂದುಳಿದ ವರ್ಗಗಳ ಶುಲ್ಕವಿನಾಯಿತಿ ಕಾರ್ಯಕ್ರಮಕ್ಕಾಗಿ 2013-14ನೇ ಸಾಲಿನಲ್ಲಿ ಜಿಲ್ಲಾ ವಲಯ ಯೋಜನೇತರ ಲೆಕ್ಕಶೀರ್ಷಿಕೆ 2225-00-103-0-28 ರಡಿಯಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ರೂ.3423.14 ಲಕ್ಷಗಳು ಉಳಿತಾಯವಾಗಿರುವುದರಿಂದ ಹಾಗೂ ಸದರಿ ಕಾರ್ಯಕ್ರಮಗಳು ಒಂದೇ ಬಗೆಯದಾಗಿರುವುದರಿಂದ ರಾಜ್ಯ ವಲಯ ಗ್ರೂಪ್-ಎ ಕೋರ್ಸ್‌ಗಳ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರು ಮಾಡುವ ಉದ್ದೇಶಕ್ಕಾಗಿ, ಜಿಲ್ಲಾ ವಲಯ ಯೋಜನೇತರ ಕಾರ್ಯಕ್ರಮದಡಿ ಉಳಿಯುವ ಒಟ್ಟು ರೂ.3117.69 ಲಕ್ಷಗಳನ್ನು ಬಳಸಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಲಾಗಿದೆ.

<u>ಷರತ್ತುಗಳು</u>:

1) ಜಿಲ್ಲಾ ವಲಯ ಯೋಜನೇತರ ಲೆಕ್ಕಶೀರ್ಷಿಕೆ 2225-00-103-0-28 ರಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ವೆಚ್ಚ ಭರಿಸಿ ಬಾಕಿ ಉಳಿದಿರುವ ಅನುದಾನವನ್ನು ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು ಚೆಕ್ ಮೂಲಕ ಸೆಳೆದು ರಾಜ್ಯ ಮಟ್ಟದ ಅನುಷ್ಠಾನಾಧಿಕಾರಿಗಳಿಗೆ ಡಿ.ಡಿ. ಮೂಲಕ ಒಪ್ಪಿಸುವುದು:
2) ಜಿಲ್ಲಾ ವಲಯ ಯೋಜನೇತರ ಲೆಕ್ಕಶೀರ್ಷಿಕೆ 2225-00-103-0-28 ರಡಿಯಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ, ಉಳಿತಾಯವಾಗಿರುವ ಮೊತ್ತಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಬಿಲ್ಲನ್ನು ತಯಾರುಮಾಡಿ, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಇವರ ಮೇಲು ರುಜು ಪಡೆದು ಖಜಾನೆಗೆ ಸಲ್ಲಿಸುವುದು.
3) ಜಿಲ್ಲಾ ಖಜಾನಾದಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಿಂದ ಈ ಆದೇಶದನುಸಾರ ಸಲ್ಲಿಸಲ್ಪಡುವ ಬಿಲ್ಲುಗಳನ್ನು ಮಾನ್ಯ ಮಾಡಿ ರಾಜ್ಯ ಮಟ್ಟದ

ಅನುಷ್ಠಾನಾಧಿಕಾರಿಗಳಾದ ಉಪ ನಿರ್ದೇಶಕರು(ವಸತಿ ನಿಲಯ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಹೆಸರಿಗೆ ಚೆಕ್ ನೀಡತಕ್ಕದ್ದು.

4) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಸದರಿ ಲೆಕ್ಕಶೀರ್ಷಿಯಡಿ ಉಳಿತಾಯವಾಗಿರುವ ಮೊತ್ತಕ್ಕೆ ಚೆಕ್ಕನ್ನು ಪಡೆದು ರಾಜ್ಯ ಮಟ್ಟದ ಅನುಷ್ಠಾನಾಧಿಕಾರಿಗಳಾದ ಉಪ ನಿರ್ದೇಶಕರು(ವಸತಿ ನಿಲಯ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಸೂಚಿಸುವ ಬ್ಯಾಂಕಿನ ಹೆಸರಿಗೆ ಜಿಲ್ಲಾ ನೋಡಲ್ ಬ್ಯಾಂಕಿನ ಮೂಲಕ ಡಿ.ಡಿ. ತೆಗೆದು ಸಲ್ಲಿಸುವುದು.

5) ರಾಜ್ಯ ಮಟ್ಟದ ಅನುಷ್ಠಾನಾಧಿಕಾರಿಗಳಾದ ಉಪ ನಿರ್ದೇಶಕರು(ವಸತಿ ನಿಲಯ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಮೇಲ್ಕಂಡಂತೆ ಪಡೆದ ಮೊತ್ತವನ್ನು ಸರ್ಕಾರದ ಮಾರ್ಗಸೂಚನೆಯನುಸಾರ ಗ್ರೂಪ್-ಎ ಕೋರ್ಸುಗಳ ಅರ್ಹರಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರು ಮಾಡಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವುದು.

6) ಜಿಲ್ಲಾ ವಲಯ ಯೋಜನೇತರ ಲೆಕ್ಕಶೀರ್ಷಿಕೆ 2225-00-103-0-28 ರಡಿ ಜಿಲ್ಲಾವಾರು ಪಡೆದ ಮೊತ್ತಕ್ಕೆ ಉಪಯೋಗ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಸಲ್ಲಿಸುವುದು.

7) ಗ್ರೂಪ್-ಎ ಕೋರ್ಸುಗಳ ಅರ್ಹರಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಂಜೂರು ಮಾಡಿ, ಒಂದು ವೇಳೆ ಅನುದಾನ ಉಳಿತಾಯವಾದಲ್ಲಿ ಸದರಿ ಹಣವನ್ನು ಲೆಕ್ಕಶೀರ್ಷಿಕೆ "0250-00-102-0-2 **(Receipts from department of Backward classes and Minorities including undisbursed Scholarship and Loss of fee income Grants)** ರಲ್ಲಿ ಜಮಾ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ 290 ವೆಚ್ಚ-3/2014 ದಿನಾಂಕ 22-3-2014 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಹೆಚ್.ಬಿ. ರಘುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

<u>ಇವರಿಗೆ</u>:-

1. ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ)
3. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ( ಆಯವ್ಯಯ ಮತ್ತು ಸಂಪನ್ಮೂಲ)
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು,(ಹಿಂ.ವ.ಕ.ಇ. ಆಯುಕ್ತರು ಇವರ ಮುಖಾಂತರ).
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಕೇಂದ್ರ, 2ನೇ ಮಹಡಿ, ಸೌತ್ ಬ್ಲಾಕ್, ಖನಿಜ ಭವನ, ದೇವರಾಜ ಅರಸು ರಸ್ತೆ, ಬೆಂಗಳೂರು
8. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ (ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಮುಖಾಂತರ)
9. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು

10. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು,(ಹಿಂ.ವ.ಕ.ಇ. ಆಯುಕ್ತರು ಇವರ ಮುಖಾಂತರ).
11. ಆಂತರಿಕ ಆರ್ಥಿಕ ಸಲಹೆಗಾರರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
12. ಸರ್ಕಾರದ ಪ್ರಧಾನಕಾರ್ಯದರ್ಶಿಹಿಂದುಳಿದ ವರ್ಗಗಳ ಕಲ್ಯಾಣ ಇವರ, ಆಪ್ತಕಾರ್ಯದರ್ಶಿಗಳು
13. ಸರ್ಕಾರದ ಉಪ ಕಾರ್ಯದರ್ಶಿ, ಹಿಂ.ವ.ಕ. ಇವರ ಆಪ್ತಸಹಾಯಕರು,
14. ಹೆಚ್ಚುವರಿ ಪ್ರತಿಗಳು,
15. ಶಾ.ರ.ಕ.